**ಬೆಳಗಾವಿಯ 7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕೋಡಿ.**

**ಎಸ್.ಸಿ.ನಂ. 5057/2023.**

**ಸಿ.ಡಬ್ಲ್ಯೂಃ–5 ಪಿ.ಡಬ್ಲ್ಯೂಃ– 4**

**ದಿಃ 29.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

| | | |
|---|---|---|
| ಪೂರ್ಣ ಹೆಸರು | : | ಗಣೇಶ ಸುರೇಶ ಕಾಂಬಳೆ |
| ವಯಸ್ಸು | : | 30 ವರ್ಷ. |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ನಿಪ್ಪಾಣಿ |

**ಮುಖ್ಯ ವಿಚಾರಣೆಃ–** ಮಾನ್ಯ ಸರಕಾರಿ ಅಭಿಯೋಜಕರವರಿಂದಃ–

1) ಚಾ.ಸಾ.1 ಗೊತ್ತಿಲ್ಲ. ಚಾ.ಸಾ. 4 ರವರು ನನಗೆ ಗೊತ್ತು. ಆರೋಪಿ ನನಗೆ ಗೊತ್ತಿಲ್ಲ. ಆರೋಪಿಯು ಯಾರಿಗೆ, ಯಾವಾಗ ಮತ್ತು ಎಲ್ಲಿ ಹಲ್ಲೆ ಮಾಡಿದ್ದಾನೆಂದು ನನಗೆ ಗೊತ್ತಿಲ್ಲ. ಚಾ.ಸಾ.1 ರವರಿಗೆ ಆರೋಪಿ ಹಲ್ಲೆ ಮಾಡಿದ್ದಾನೆಂದು ನಾನು ಪೋಲಿಸರಿಗೆ ಹೇಳಿಕೆ ನೀಡಿಲ್ಲ. ಆರೋಪಿ ಚಾ.ಸಾ.1 ರವರಿಗೆ ಹಲ್ಲೆ ಮಾಡಿರುವುದನ್ನು ನಾನು ನೋಡಿಲ್ಲ. ಚಾ.ಸಾ.1 ರವರ ಜೊತೆ ನಾನು ಆಸ್ಪತ್ರೆಗೆ ಹೋಗಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿ ಕೋರಿದ್ದಾರೆ, ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ– ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

1) ನಾನು ಪೋಲಿಸರಿಗೆ ನೀಡಿದ ಹೇಳಿಕೆಯಲ್ಲಿ ಚಾ.ಸಾ.1 ನಿಪ್ಪಾಣಿಯ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ಹಹಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೋಟಾರಸೈಕಲ ಮೇಲೆ ಕೆರೆಯ ಹತ್ತಿರ ಹೋಗುತ್ತಿದ್ದಾಗ ಆರೋಪಿ ಮತ್ತು ಆತನ ಜೊತೆಯಲ್ಲಿ ಒಬ್ಬಳು ಹುಡುಗಿ ಇದ್ದು, ಚಾ.ಸಾ.1 ರವರು ಅವರನ್ನು ವಿಚಾರಣೆ ಮಾಡುತ್ತಿದ್ದಾಗ ಆರೋಪಿಯು ಮರಾಠಿ ಭಾಷೆಯಲ್ಲಿ ಅವರಿಗೆ ಬೈಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಚಾ.ಸಾ.1 ರವರು ಆರೋಪಿಗೆ ಪೋಲಿಸ ಠಾಣೆಗೆ ಬರುವಂತೆ ಕರೆದಾಗ ಆರೋಪಿಯು ಸ್ಥಳದಲ್ಲಿ ಬಿದ್ದಿದ್ದ ನ್ಯಾಯಾಲಯದ ಮುಂದಿರುವ ಕಲ್ಲಿನಿಂದ ಅವರ ತಲೆಗೆ ಹಲ್ಲೆ ಮಾಡಿದ್ದಾನೆ ಎಂದರೆ ನಾನು ನೋಡಿಲ್ಲ. ಆಗ ನಾನು ಮತ್ತು ಚಾ.ಸಾ.4 ರವರು ಜಗಳ ಬಿಡಿಸಿದ್ದೇವೆ ಎಂದರೆ ಸುಳ್ಳು. ನಂತರ ಆರೋಪಿ ಮತ್ತು ಆತನ ಜೊತೆಯಲ್ಲಿದ್ದ ಹುಡುಗಿಯ ಹೆಸರನ್ನು ತಿಳಿದುಕೊಂಡು ಚಾ.ಸಾ.1 ರವರು ಅವರನ್ನು ಪೋಲಿಸ ಠಾಣೆಗೆ ಕರೆದುಕೊಂಡು ಹೋಗಲು ಕರ್ತವ್ಯದ ಮೇಲೆ ಬಂದಿದ್ದರು ಎಂದರೆ ಸುಳ್ಳು. ಸದರಿ ಘಟನೆಯು ದಿನಾಂಕಃ 12.02.2022 ರಂದು ಮದ್ಯಾಹ್ನ 02.30 ಗಂಟೆಗೆ ಆಗಿರುತ್ತದೆ ಎಂದರೆ ನಾನು ನೋಡಿಲ್ಲ. ನಂತರ ಚಾ.ಸಾ.1 ರವರನ್ನು ನಾನು ಮತ್ತು ಚಾ.ಸಾ.4 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೇವೆ ಎಂದರೆ ಸುಳ್ಳು. ನಾನು ನನ್ನ ಹೇಳಿಕೆಯನ್ನು ಮರಾಠಿ ಭಾಷೆಯಲ್ಲಿ ಹೇಳಿದ್ದು, ಕನ್ನಡದಲ್ಲಿ ಅನುವಾದ ಮಾಡಿ ನನ್ನ ಹೇಳಿಕೆಯನ್ನು ಓದಿ ಹೇಳಿದ್ದಾರೆ ಎಂದರೆ ಸುಳ್ಳು. ಮೇಲ್ಕಂಡಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸುಳ್ಳು. ಸದರಿ ಹೇಳಿಕೆಯನ್ನು ನಿ.ಪಿ.4 ಎಂದು

ಗುರುತಿಸಲಾಯಿತು. ನಿ.ಪಿ.2 ರ ಛಾಯಾಚಿತ್ರದಲ್ಲಿ ನಾನಿದ್ದೇನೆ ಎಂದರೆ ಸರಿ. ಪೋಲಿಸರು ಸ್ಥಳಕ್ಕೆ ಕರೆದುಕೊಂಡು ಹೋಗಿ ನನ್ನ ಛಾಯಾಚಿತ್ರ ತೆಗೆದಿರುತ್ತಾರೆ. ಮೇಲ್ಕಂಡಂತೆ ಘಟನೆ ನಡೆದಿದ್ದರೂ ಸಹ ಮತ್ತು ನಿ.ಪಿ.4 ರಂತೆ ನಾನು ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ– ಆರೋಪಿ ಪರ ವಕೀಲರಿಂದಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು.)

(ಸಾ.ಓ.ಹೆ.ಕೆ.ಸ.ಅ.)

(ವಿಜಯ ಕುಮಾರ)
7 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕೋಡಿ.